# 3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು.

Spl.C.205/2018

C.W.1
P.W. 2

ದಿನಾಂಕಃ 13-09-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

ದಿ 12-04-18 ರಂದು ಪೊಲೀಸರು ನನ್ನನ್ನು ಕೃತ್ಯ ನಡೆದ ಸ್ಥಳ ಗೌರಮ್ಮ ರವರ ಮನೆಯ ಹತ್ತಿರ ಸ್ಥಳಪಂಚನಾಮೆಯನ್ನು ಮಾಡಿರುತ್ತಾರೆ. ಆಗ ಪಂಚರಾದ ಚಾಸಾ-7 ಮತ್ತು 8 ರವರು ಹಾಜರಿದ್ದು, ತನಿಖಾಧಿಕಾರಿಗಳು ಪಂಚನಾಮೆಯನ್ನು ಬೆಳಗ್ಗೆ 10 ಗಂಟೆಯಿಂದ 11 ಗಂಟೆಯವರಿಗೆ ಮಾಡಿರುತ್ತಾರೆ. ಸದರಿ ಪಂಚನಾಮೆಗೆ ನಾನು ಸಹಿ ಮಾಡಿರುತ್ತೇನೆ . ಸದರಿ ಪಂಚನಾಮೆಯನ್ನು ನಿಪಿ-3 ಎಂದು, ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು.

ನನಗೆ ಗಾಯವಾಗಿದ್ದ ಕಾರಣ ದೂರಿನಲ್ಲಿ ಆರೋಪಿತರ ಜಾತಿ ನಮೂದಿಸಿರುವುದಿಲ್ಲ, ನಂತರ ತನಿಖಾಧಿಕಾರಿಗಳ ಮರುಹೇಳಿಕೆಯಲ್ಲಿ ಆರೋಪಿತರು ಲಿಂಗಾಯತ ಜನಾಂಗಕ್ಕೆ ಸೇರಿದವರು ಎಂದು ಮತ್ತು ನಾನು ಪರಿಶಿಷ್ಟ ಜಾತಿಯ ಬೋವಿ ಜನಾಂಗಕ್ಕೆ ಸೇರಿದವನು ಎಂದು ಹೇಳಿರುತ್ತೇನೆ . ನ್ಯಾಯಾಲಯದ ಮುಂದೆ ಇರುವ ಪುನೀತ್ ಮತ್ತು ಅವಿನಾಶ್ ರವರು ಹಲ್ಲೆ

ಮಾಡಿರುವ ಚಾಕುವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ಎಂಓ-1 ಎಂದು ಗುರುತಿಸಲಾಗಿದೆ . ನಾನು ಬಿಳಿಗಿರಿ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದುಕೊಂಡಿರುತ್ತೇನೆ . ಆರೋಪಿತರು ನನಗೆ ಉಳಿದ ಸಾಲದ ಹಣವನ್ನು ಕೊಡುತ್ತೇವೆಂದು ಹೇಳಿ ತಮ್ಮ ಮನೆಗೆ ಕರೆಸಿಕೊಂಡು ಗಲಾಟೆ ಮಾಡಿರುತ್ತಾರೆ. ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ ಎನ್ ಬಿ ವಕೀಲರಿಂದಃ</u>

ಆರೋಪಿ ವಕೀಲರ ವಿನಂತಿಯ ಮೇರೆಗೆ ಮುಂದೂಡಲಾಯಿತು.

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಿ ಕೇ ಸ ಇದೆ ಎಂದು ಒಪ್ಪಿದ್ದಾರೆ.

**3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
ತುಮಕೂರು